# **1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

## ಸ್ಪೆಷಲ್ ಕೇಸ್: **54/2019**

ಪ್ರಾಸಾ- 16
ಚಾಸಾ- 23

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಗೀತಾ ಹೆಚ್.ಕೆ. |
| ಗಂಡನ ಹೆಸರು | : | ಅಶೋಕ್ ಎಸ್. |
| ವಯಸ್ಸು | : | 53 ವರ್ಷ |
| ವೃತ್ತಿ | : | ವೈದ್ಯಾಧಿಕಾರಿಗಳು, ಸರ್ಕಾರಿ ಆಸ್ಪತ್ರೆ ಸಕಲೇಶಪುರ |
| ವಾಸ | : | ಸಕಲೇಶಪುರ. |

ಸಾಕ್ಷಿಯನ್ನು ದಿನಾಂಕ **23-08-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:(Through V.C. in Jitsi meet app)

ನಾನು ಜನವರಿ-2019 ರಿಂದ ಡಿಸೆಂಬರ್-2019 ರವರೆಗೆ ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತಿದ್ದೇನೆ.

ದಿನಾಂಕಃ 20-10-2019 ರಂದು ಸಂಜೆ ಸುಮಾರು 7.40 ಗಂಟೆಗೆ ಪ್ರಾಸಾ-1 ರವರು ಎಡ ಎದೆಯ ಮೇಲೆ gun shot injury ಯಿಂದ ಆಸ್ಪತ್ರೆಗೆ ಬಂದಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಅವರ ಎದೆಯ ಎಡ ಭಾಗದಲ್ಲಿ Soft tissue injury to chest left side wound is superficial, a single pellet was struck with in the soft tissue of the chest wall muscle (subcutaneously) (½ inch deep).

ಸದರಿ pellet ನ್ನು remove ಮಾಡಲು ನಾವು ಅವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದೆವು. ಮಡಿಕೇರಿ ಆಸ್ಪತ್ರೆಯಲ್ಲಿ ಅವರಿಗೆ local anesthesia ನೀಡಿ ಸದರಿ pellet ನ್ನು ತೆಗೆದಿದ್ದಾರೆ. ಆ ಬಳಿಕ ಗಾಯಾಳು ಸಾಮಾನ್ಯ ಸ್ಥಿತಿಯಲ್ಲಿ ಇದ್ದು, ಅವರಿಗೆ ಯಾವುದೆ ತೊಂದರೆ ಇದ್ದಿರುವುದಿಲ್ಲ. ಅದೇ ರೀತಿ ಗಾಯಾದ ಪ್ರಮಾಣ ಪತ್ರ

ನೀಡಿದ್ದೇನೆ. ನನ್ನ ಅಭಿಪ್ರಾಯದ ಪ್ರಕಾರ ಮೇಲೆ ಹೇಳಿದ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಈಗ ನಾನು ನೋಡುತ್ತಿರುವ ಗಾಯದ ಪ್ರಮಾಣ ಪತ್ರ ನಾನು ನೀಡಿದ ಗಾಯದ ಪ್ರಮಾಣ ಪತ್ರ ಆಗಿದ್ದು ಅದನ್ನು ನಿಪಿ-19 ಎಂದು ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನಮುತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದ:</u>**

ನಾನು ಫ್ರಾಸಾ-1 ರವರನ್ನು ಪರೀಕ್ಷಿಸಿದಾಗ ಸಮಯ 7.55 ಗಂಟೆಗೆ ಆಗಿದ್ದು, ಅವರು 7.40 ಗಂಟೆಗೆ ತನಗೆ gun shot injury ಆಗಿದೆ ಎಂದು ಹೇಳಿದ್ದರು ಎಂದರೆ ಸರಿ.

**<u>ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:</u>**

ಫ್ರಾಸಾ-1 ರವರನ್ನು ವಿಜಯ್ ಎಂಬುವವರು ಕರೆದುಕೊಂಡು ಬಂದಿದ್ದರು. ವಿಜಯ್ ಎಂಬುವವರು ಕರೆದುಕೊಂಡು ಬಂದಿದ್ದಾರೆ ಎಂದು ನನಗೆ ಜ್ಞಾಪಕ ಇದೆ. ಫ್ರಾಸಾ-1 ಬಂದಿದ್ದಾಗ ಯಾವ ರೀತಿಯ ಬಟ್ಟೆಯಾಗಿದ್ದರು ಮತ್ತು ಸದರಿ ಬಟ್ಟೆಗಳಿಲ್ಲಿ ತೂತುಗಳು ಮತ್ತು ರಕ್ತದ ಕಲೆಗಳು ಇದ್ದ ಬಗ್ಗೆ ನಾನು ಗಮನಿಸಿಲ್ಲ. ನಾನು ಅವರನ್ನು ನೋಡಿದಾಗ ಅವರ ದೇಹದಲ್ಲಿ ಕೇವಲ ಒಂದು pellet ಮಾತ್ರ ಇತ್ತು ಎಂದರೆ ಸರಿ. ಮೇಲ್ನೋಟಕ್ಕೆ ಬೇರೆ ಯಾವುದೇ pellet ಗಳು ಹಾಗೂ ಗಾಯಗಳು ಫ್ರಾಸಾ-1 ರವರ ದೇಹದಲ್ಲಿ ಇದ್ದದ್ದು ಕಾಣಿಸಿರುವುದಿಲ್ಲ. ಒಂದು pellet ಒಬ್ಬ ಮನುಷ್ಯನ ದೇಹದ ಒಳಗೆ ಹೋದರೆ ಅದರ ತೂತಾಗಲೀ, ಗಾಯವಾಗಲೀ ಕಾಣಬೇಕಾಗುತ್ತದೆ ಎಂದರೆ ಸರಿ. ನಾನು ನೋಡಿದಾಗ ಒಂದೇ pellet ಇದ್ದ ಕಾರಣ ನಾನು ಒಂದೇ ಗಾಯವಾಗಿದೆ ಎಂದು ಬರೆದಿದ್ದೇನೆ ಎಂದರೆ ಸರಿ. ಒಬ್ಬ ವ್ಯಕ್ತಿ 10 ಅಡಿ ದೂರದಿಂದ ಗುಂಡು ಹೊಡೆದರೆ exit wound ಬರುತ್ತದೆ ಎಂದರೆ ಸರಿ ಅಥವಾ ಸಾಧ್ಯತೆ ಇಲ್ಲದೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನೇರವಾಗಿ ಗುಂಡು ಹೊಡೆದರೆ ಆಗುವ ಸಾಧ್ಯತೆ ಇದೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಫ್ರಾಸಾ-1 ನನಗೆ ಯಾವುದೇ ಗಾಯದ ಇತಿಹಾಸವನ್ನು ಹೇಳಿರಲಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ